**ಕರ್ನಾಟಕ ಸರ್ಕಾರ**

ಕ್ರಮಾಂಕ: ಇಡಿ 243 ಯುಆರ್‌ಸಿ 2010

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 6-12-2010

## ಸುತ್ತೋಲೆ

ವಿಷಯ:- ವಿಶ್ವ ಸಂಸ್ಕೃತ ಪುಸ್ತಕ ಮೇಳದಲ್ಲಿ ಭಾಗವಹಿಸುವ ಸಂಸ್ಕೃತ ಅಧ್ಯಾಪಕರು ಹಾಗೂ ಶಿಕ್ಷಕರುಗಳಿಗೆ ಅನ್ಯಕಾರ್ಯ ನಿಮಿತ್ತ ರಜೆಯನ್ನು ಮಂಜೂರು ಮಾಡುವ ಬಗ್ಗೆ.

---

ಕರ್ನಾಟಕ ಸರ್ಕಾರ, ವಿವಿಧ ಸಂಸ್ಕೃತ ವಿಶ್ವವಿದ್ಯಾಲಯಗಳು ಮತ್ತು ಬೆಂಗಳೂರಿನ ಸಂಸ್ಕೃತ ಭಾರತಿ ಇವರ ಸಹಯೋಗದೊಂದಿಗೆ 2011ರ ಜನವರಿ 6 ರಿಂದ 10 ರವರೆಗೆ ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ವಿಶ್ವ ಸಂಸ್ಕೃತ ಪುಸ್ತಕ ಮೇಳ ಹಾಗೂ ಸಂಸ್ಕೃತ ವಿದ್ವತ್ ಸಮ್ಮೇಳವನ್ನು ಏರ್ಪಡಿಸಲಾಗಿದೆ. ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸುವ ಎಲ್ಲಾ ಅಧ್ಯಾಪಕರು ಹಾಗೂ ಶಿಕ್ಷಕರುಗಳಿಗೆ ಸದರಿ ದಿನಾಂಕಗಳಂದು ಅನ್ಯಕಾರ್ಯ ನಿಮಿತ್ತ ರಜೆಯನ್ನು ಮಂಜೂರು ಮಾಡಲು ಇಲಾಖಾ ಮುಖ್ಯಸ್ಥರಿಗೆ ಅನುಮತಿಸಲಾಗಿದೆ. ಸದರಿ ಸಮ್ಮೇಳನದಲ್ಲಿ ಭಾಗವಹಿಸಿದ್ದಕ್ಕೆ ಹಾಜರಾತಿ ಪತ್ರವನ್ನು ಸಂಬಂಧಿಸಿದ ಅಧ್ಯಾಪಕರು ಹಾಗೂ ಶಿಕ್ಷಕರುಗಳಿಂದ ಪಡೆಯತಕ್ಕದ್ದು.

(ಬಿ.ಎಸ್. ಜಾಪಾಲಿ)
ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾನಿಲಯಗಳು)

ಇವರುಗಳಿಗೆ:-

1. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಗೆ.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.
4. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.

ಪ್ರತಿ:-

1. ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
2. ಮಾನ್ಯ ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ.
4. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಅರಮನೆ ರಸ್ತೆ, ಬೆಂಗಳೂರು.
5. ಸದಸ್ಯ-ಕಾರ್ಯದರ್ಶಿಯವರು, ಕರ್ನಾಟಕ ಜ್ಞಾನ ಆಯೋಗ, ವಿಧಾನಸೌಧ, ಬೆಂಗಳೂರು.
6. ಸಂಯೋಜಕರು, ವಿಶ್ವ ಸಂಸ್ಕೃತ ಪುಸ್ತಕ ಮೇಳ, "ಅಕ್ಷರಮ್", 8ನೇ ಕ್ರಾಸ್, 2ನೇ ಹಂತ, ಗಿರಿನಗರ, ಬೆಂಗಳೂರು-560 085.

**ಕರ್ನಾಟಕ ಸರ್ಕಾರ**

ಕ್ರಮಾಂಕ: ಇಡಿ 127 ಯುಆರ್‌ಸಿ 2010 (ಭಾಗ)

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 20-7-2010

**ಸುತ್ತೋಲೆ**

ಸಂಸ್ಕೃತ ಭಾರತಿ, ಬೆಂಗಳೂರು ಇವರು ಕೇಂದ್ರ ಸರ್ಕಾರ ಮತ್ತು ಹಲವಾರು ಸಂಸ್ಕೃತ ಸಂಸ್ಥಾನಗಳ ಸಹಯೋಗದೊಡನೆ 7-10 ಜನವರಿ 2011 ರಂದು ಬೆಂಗಳೂರಿನಲ್ಲಿ ವಿಶ್ವ ಸಂಸ್ಕೃತ ಪುಸ್ತಕಗಳ ಮೇಳವನ್ನು ಆಯೋಜಿಸಿರುತ್ತದೆ. ಈ ವಿಶ್ವ ಸಂಸ್ಕೃತಿ ಪುಸ್ತಕಗಳ ಮೇಳದಲ್ಲಿ ಮಹತ್ತರವಾದ ಸಂಸ್ಕೃತ ಭಾಷೆಯ ವಿದ್ವಾನ ಪುಸ್ತಕಗಳನ್ನು ಜಗತ್ತಿನ ಪ್ರಮುಖ ಸಂಸ್ಕೃತ ಪುಸ್ತಕಗಳ ಪ್ರಕಾಶಕರುಗಳು ಪ್ರದರ್ಶಿಸಲಿದ್ದಾರೆ. ಈ ಪುಸ್ತಕಗಳು ಇದುವರೆಗೂ ಲಭ್ಯವಾಗದೇ ಇರುವಂತಹ ಹಲವಾರು ಪ್ರಮುಖ ಪುಸ್ತಕಗಳು ಲಭ್ಯವಾಗುವುದಲ್ಲದೇ, ಅದರಿಂದ ಸಂಸ್ಕೃತ ಪಾಠಶಾಲೆಗಳು, ಕಾಲೇಜುಗಳು ಪ್ರದರ್ಶಿಸಲಿದ್ದಾರೆ ಮತ್ತು ವಿಶ್ವವಿದ್ಯಾಲಯಗಳವರೂ ಇಂತಹ ಪುಸ್ತಕಗಳನ್ನು ಖರೀದಿಸಲು ಇದು ತಕ್ಕ ಸಮಯವಾಗಿರುವುದರಿಂದ ಈ ಬಗ್ಗೆ ತಮ್ಮ ಪುಸ್ತಕ ಖರೀದಿ ಆಯವ್ಯಯದಲ್ಲಿ ಶೇ.10 ರಷ್ಟನ್ನು ಇಂತಹ ಪುಸ್ತಕಗಳ ಖರೀದಿಗೆ ತೆಗೆದಿರಿಸಲು ಅಗತ್ಯ ಕ್ರಮ ವಹಿಸುವಂತೆ ತಿಳಿಸಲಾಗಿದೆ. ಈ ವಿಷಯದಲ್ಲಿ ಸಂಬಂಧಪಟ್ಟ ಎಲ್ಲಾ ಕಾಲೇಜು ಮತ್ತು ಪಾಠಶಾಲೆಗಳಿಗೂ ಸಹ ತಿಳಿಸಬೇಕೆಂದು ಈ ಮೂಲಕ ಕೋರಲಾಗಿದೆ.

(ಬಿ.ಎಸ್. ಜಾಪಾಲಿ)
ಸರ್ಕಾರದ ಉಪ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ)

ಇವರಿಗೆ

1. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿ. ಬೆಂಗಳೂರು.
4. ನಿರ್ದೇಶಕರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು.
5. ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಗೆ.
6. ಹೆಚ್ಚುವರಿ ಪ್ರತಿಗಳು.